**ವಿಧವಾ ಮತ್ತು ವೃದ್ಧಾಪ್ಯ ವೇತನದ ಬಗ್ಗೆ:**

1265 - ಶ್ರೀಮತಿ ಮೋಟಮ್ಮ (ಮೂಡಿಗೆರೆ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

*ಅ) ವಿಧವಾ ವೇತನ ಹಾಗೂ ವೃದ್ಧಾಪ್ಯ ವೇತನ ಆಗಾಗ ನಿಂತು ಹೋಗಿ ಬಡವರಿಗೆ ತೊಂದರೆ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

*ಆ) ಈ ಬಗ್ಗೆ ಸರ್ಕಾರ ಏನು ಕ್ರಮ ಕೈಗೊಂಡಿದೆ?*

*ಇ) ಮೂಡಿಗೆರೆ ತಾಲ್ಲೂಕಿನಲ್ಲಿ ಎಷ್ಟು ಜನರ ವೃದ್ಧಾಪ್ಯವೇತನ ಹಾಗೂ ವಿಧವಾ ವೇತನ ನಿಂತು ಹೋಗಿದೆ?*

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು):

ಅ) ಹೌದು.

ಆ) ವೃದ್ಧಾಪ್ಯ ವೇತನ ಹಾಗೂ ವಿಧವಾ ವೇತನ ನಿಂತು ಹೋದ ಬಗ್ಗೆ ಅರ್ಜಿದಾರರಿಂದ ಅರ್ಜಿ ಬಂದಲ್ಲಿ, ಅದನ್ನು ಪಾವತಿ ಮಾಡಲು ಸೂಕ್ತ ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಆದಾಗ್ಯೂ ಈ ವೇತನವನ್ನು ಸುಲಭವಾಗಿ ಪಾವತಿ ಮಾಡಲು ಅನುಕೂಲವಾಗುವಂತೆ ಫಲಾನುಭವಿಗಳಿಗೆ ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಖಾತೆ ತೆರೆಯಲು ಸೂಚಿಸಲಾಗುತ್ತಿದೆ.

ಇ)

| | |
|---|---|
| ವೃದ್ಧಾಪ್ಯ ವೇತನ | - 107 |
| ವಿಧವಾ ವೇತನ | - 87 |

ಮೇಲ್ಕಂಡ ಪ್ರಕರಣಗಳು ಖೋಟಾ ಎಂದು ಕಂಡು ಬಂದುದರಿಂದ ಅವುಗಳಿಗೆ ಪಾವತಿಯನ್ನು ನಿಲ್ಲಿಸಲಾಗಿದೆ.

**ಮೂಡಿಗೆರೆ ತಾಲ್ಲೂಕಿನಲ್ಲಿ ಟಿ. ಟಿ. ರೇಕಾರ್ಡ್‌ಗಳ ಬಗ್ಗೆ.**

750 - ಶ್ರೀಮತಿ ಮೋಟಮ್ಮ (ಮೂಡಿಗೆರೆ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ಮೂಡಿಗೆರೆ ತಾಲ್ಲೂಕಿನಲ್ಲಿ ಸುಮಾರು 80ನೇ ಇಸವಿಯಿಂದ ಇಲ್ಲಿಯತನಕ ಎಷ್ಟು ಟಿ.ಟಿ.ರೇಕಾರ್ಡ್ ಮಾಡಲಾಗಿದೆ;(ಪ್ರತಿವರ್ಷದ ಪಟ್ಟಿ ಕೊಡುವುದು);*

*ಆ) ಈ ಟಿ.ಟಿ. ರೇಕಾರ್ಡ್‌ನಲ್ಲಿ ದುರ್ಬಲ ಹಾಗೂ ಹರಿಜನ-ಗಿರಿಜನರ ರೇಕಾರ್ಡ್‌ಗಳು ಎಷ್ಟಿವೆ; ಇತರೆ ವರ್ಗದ ರೇಕಾರ್ಡ್‌ಗಳು ಎಷ್ಟಿವೆ?*

*ಇ) ಟಿ. ಟಿ. ರೇಕಾರ್ಡಿನ ಆಧಾರದ ಮೇಲೆ ಮಂಜೂರಾದವು ಎಷ್ಟು;ಯಾವ ಯಾವ ವರ್ಗದವರಿಗೆ ಮಂಜೂರಾಗಿದೆ?*

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಮಂತ್ರಿಗಳು):

ಅ) 1246 (ವರ್ಷವಾರು ಪಟ್ಟಿಯನ್ನು ಲಗತ್ತಿಸಲಾಗಿದೆ)

ಆ) ಒಟ್ಟು 1246 ಟಿ. ಟಿ. ರೇಕಾರ್ಡ್‌ಗಳ ಪೈಕಿ 226 ಹರಿಜನ-ಗಿರಿಜನರ ರೇಕಾರ್ಡ್‌ಗಳು, 74 ದುರ್ಬಲ ವರ್ಗದವರ ಮತ್ತು 946 ಇತರೆ ವರ್ಗದವರ ರೇಕಾರ್ಡ್‌ಗಳು ಇವೆ.

ಇ) ಈ ಟಿ. ಟಿ. ರೇಕಾರ್ಡ್‌ಗಳ ಆಧಾರದ ಮೇಲೆ 673 ಜನಗಳಿಗೆ ಒಟ್ಟು 129 ಎಕರೆ 25 ಗುಂಟೆ ಸರ್ಕಾರಿ ಜಮೀನನ್ನು ಮಂಜೂರು ಮಾಡಲಾಗಿದ್ದು, ವಿವರಗಳು ಈ ಕೆಳಕಂಡಂತಿದೆ.

| | | |
|---|---|---|
| 1. ಹರಿಜನ : ಗಿರಿಜನರು | 194 ಜನರು | 56.38 ಎಕರೆ |
| 2. ದುರ್ಬಲವರ್ಗದವರು | 118 ಜನರು | 8.10 ಎಕರೆ |
| 3. ಇತರೆ ವರ್ಗದವರು | 361 ಜನರು | 64.17 ಎಕರೆ |
| | 673 ಜನರು | 129.25 ಎಕರೆ |

**ANNEXURE TO L.A. QUESTION NO. 750**

| Year | SC/ST | Weaker Section | Others | Total |
|---|---|---|---|---|
| 1980-81 | 5 | 8 | 47 | 60 |
| 1981-82 | 9 | 6 | 82 | 97 |
| 1982-83 | 46 | 8 | 61 | 115 |
| 1983-84 | 5 | 10 | 62 | 77 |
| 1984-85 | 1 | 1 | 29 | 31 |
| 1985-86 | 103 | 24 | 342 | 469 |
| 1986-87 | 16 | 2 | 84 | 102 |
| 1987-88 | 16 | 4 | 58 | 78 |
| 1988-89 | 21 | 8 | 143 | 172 |
| 1989-90 | 4 | 3 | 38 | 45 |
| Total | 226 | 74 | 946 | 1246 |

**ಮೈಸೂರು ನಗರದಲ್ಲಿ ರೆವಿನ್ಯೂ ನಿವೇಶನಗಳು.**

764 - ಶ್ರೀ ಕೆ. ಹರ್ಷಕುಮಾರ್ ಗೌಡ (ಚಾಮರಾಜ) : ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. *ಮೈಸೂರು ನಗರದ ರೆವಿನ್ಯೂ ನಿವೇಶನಗಳನ್ನು ಸಕ್ರಮಗೊಳಿಸಲು ಸರ್ಕಾರದವರು ಕ್ರಮವನ್ನೇನಾದರೂ ಕೈಗೊಂಡಿದ್ದಾರೆಯೇ?*
2. *ಕ್ರಮ ಕೈಗೊಂಡಿದ್ದರೆ ಚದರ ಅಡಿ ಒಂದಕ್ಕೆ ಸರ್ಕಾರ ನಿಗಧಿಪಡಿಸಿರುವ ಬೆಲೆ ಏನು?*
3. *ಈ ಬಡಾವಣೆಗಳಿಗೆ ನಾಗರೀಕ ಸೌಲಭ್ಯಗಳಾದ ನೀರು, ದೀಪ, ರಸ್ತೆ ಮತ್ತು ಒಳಚರಂಡಿ ವ್ಯವಸ್ಥೆ ಮಾಡಲು ಸರ್ಕಾರ ಯೋಜಿಸಿರುವ ರೂಪುರೇಖೆಗಳು ಏನು?*
4. *ಈ ರೆವಿನ್ಯೂ ಬಡಾವಣೆಗಳಲ್ಲಿರುವ ನಿವೇಶನಗಳ ಸಕ್ರಮಗೊಳಿಸಲು ಸರ್ಕಾರ ತೆಗೆದುಕೊಂಡ ಸಕ್ರಮವೇನು?*

ಶ್ರೀ ಕೆ. ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು) :